**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆ ಇಲಾಖೆ**

ಸಂಖ್ಯೆ:ವಾತೆಅಆ(ಜಾರಿ):ದವ/ಉ.ಮ./ಸಿಆರ್:13/11-12

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರ ಕಛೇರಿ,
(ಜಾರಿ) ದಕ್ಷಿಣ ವಲಯ, ವಾಣಿಜ್ಯ ತೆರಿಗೆ
ಕಾರ್ಯಾಲಯ-2, 3ನೇ ಮಹಡಿ ಬಿ ಬ್ಲಾಕ್,
ರಾಜೇಂದ್ರನಗರ, ಕೋರಮಂಗಲ,
ಬೆಂಗಳೂರು-47, ದಿನಾಂಕ:01-12-2011.

ಪೋನ್ ನಂ.080-25704971
ಫ್ಯಾಕ್ಸ್ ನಂ.080-25704972

## :: ಅಲ್ಪಾವಧಿ ಟೆಂಡರ್ ಪ್ರಕಟಣೆ ::

ವಾಣಿಜ್ಯ ತೆರಿಗೆ ಕಾರ್ಯಾಲಯ-2, ಕೋರಮಂಗಲ, ರಾಜೇಂದ್ರನಗರ, ಬೆಂಗಳೂರು-47, ಇಲ್ಲಿ (ಎ ಮತ್ತು ಬಿ ಬ್ಲಾಕ್ ಕಟ್ಟಡದ ನಡುವೆ ಬರುವ ನೆಲಮಹಡಿಯ ಪಶ್ಚಿಮೊತ್ತರ ಭಾಗದಲ್ಲಿ - ವಿಸ್ತೀರ್ಣ 1099 ಚದರ ಅಡಿಗಳು) ನೌಕರರ ಉಪಹಾರ ಮಂದಿರವನ್ನು 1 ವರ್ಷದ ಅವಧಿಗೆ ಬಾಡಿಗೆ ಅಧಾರದ ಮೇಲೆ ನಡೆಸಲು ಅರ್ಹ ಹೋಟೇಲು ಮಾಲೀಕರಿಂದ ಎರಡು ಲಕೋಟೆ ಪದ್ಧತಿಯಲ್ಲಿ (ಟೆಕ್ನಿಕಲ್ ಬಿಡ್ ಮತ್ತು ಆರ್ಥಿಕ ಬಿಡ್) ಟೆಂಡರುಗಳನ್ನು ಅಹ್ವಾನಿಸಲಾಗಿದೆ. ನಿಗಧಿತ ಟೆಂಡರ್ ಫಾರಂ ಮತ್ತು ನಿಬಂಧನೆಗಳನ್ನು ವಾಣಿಜ್ಯ ತೆರಿಗೆ ಅಪರ ಅಯುಕ್ತರು (ಜಾರಿ) ದಕ್ಷಿಣ ವಲಯ, ಕೋರಮಂಗಲ, ಬೆಂಗಳೂರು, ಇಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಆಥವಾ ಇಲಾಖೆಯ ಅಂತರ ಜಾಲ ತಾಣ (website) http://ctax.kar.nic.in. ಇಲ್ಲಿ ಪಡೆಯಬಹುದಾಗಿದೆ.

ಈ ವಿಷಯಕ್ಕೆ ಸಂಬಂಧಪಟ್ಟ ಯಾವುದೇ ವಿವರಗಳು ನಿಬಂಧನೆಗಳು ಬೇಕಾದಲ್ಲಿ ಕಛೇರಿಯ ಕೆಲಸದ ವೇಳೆಯಾದ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ ಕಛೇರಿಯನ್ನು ಸಂಪರ್ಕಿಸಬಹುದು. ಟೆಂಡರ್‌ದಾರರು ಟೆಂಡರ್‌ನಲ್ಲಿ ಸೂಚಿಸಿರುವ ನಿಭಂದನೆಗಳನ್ನು ಪಾಲಿಸಬೇಕಾಗಿರುತ್ತದೆ. ಷರತ್ತುಗಳನ್ನು ವಿಧಿಸಿ ಸಲ್ಲಿಸಿದ ಟೆಂಡರ್‌ಗಳನ್ನು ಕಾರಣ ನೀಡದೇ ತಿರಸ್ಕರಿಸಲಾಗುವುದು.

ಟೆಂಡರ್‌ದಾರರು ಅರ್ಹತಾ ಬಿಡ್‌ನಲ್ಲಿ ತೋರಿಸಿರುವ ಅಂಶಗಳನ್ನು ಹಾಗೂ ಅದಕ್ಕೆ ಪೂರಕವಾಗಿ ಹೊಂದಿರುವ ಲೈಸನ್ಸ್‌ಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಪ್ರತ್ಯೇಕವಾದ ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಸಲ್ಲಿಸಬೇಕು. ಅದರ ಮೇಲೆ ಟೆಕ್ನಿಕಲ್ ಬಿಡ್ ಎಂದು ಬರೆದು ಸಲ್ಲಿಸಬೇಕು. ಅರ್ಹತಾ ಬಿಡ್‌ನಲ್ಲಿ ಆಯ್ಕೆಯಾದ ಟೆಂಡರ್‌ದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು.

ಆರ್ಥಿಕ ಬಿಡ್‌ನಲ್ಲಿ ಲೋಕೋಪಯೋಗಿ ಇಲಾಖೆ ನಿಗಧಿಪಡಿಸಿದ ಕನಿಷ್ಠ ಮಾಸಿಕ ಬಾಡಿಗೆಗಿಂತ ಹೆಚ್ಚು ದರಕ್ಕೆ ಬಿಡ್ ಮಾಡುವವರು, ಬಿಡ್ ದರವನ್ನು ನಮೂದಿಸಿ ಮೊಹರು ಮಾಡಿದ ಮಾಡಿದ ಲಕೋಟೆಯಲ್ಲಿ ಸಲ್ಲಿಸಬೇಕು ಹಾಗೂ ಅದರ ಮೇಲೆ ಆರ್ಥಿಕ ಬಿಡ್ ಎಂದು ನಮೂದಿಸರಬೇಕು.

ಮೊಹರು ಮಾಡಿದ ಎರಡು ಲಕೋಟೆಗಳ ಟೆಂಡರ್‌ನ್ನು ದಿನಾಂಕ:16-12-2011 ರಂದು ಸಂಜೆ 4.00 ಗಂಟೆವರೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ನಂತರ ಬಂದ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ. ಟೆಂಡರ್‌ಗಳನ್ನು ಅದೇ ದಿನ 4-30 ಗಂಟೆಗೆ ಹಾಜರಿರುವ ಟೆಂಡರುದಾರರ ಎದುರಿನಲ್ಲಿ ತೆರೆಯಲಾಗುವುದು.

ಷರತ್ತುಗಳು:

1) ಈ ಟೆಂಡರ್ ಬಗ್ಗೆ ರೂ.20,000-00 ಇ.ಎಂ.ಡಿ.ಯನ್ನು ನಿಗದಿಪಡಿಸಿದ್ದು, ಈ ಮೊಬಲಗನ್ನು ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಟೆಂಡರ್ ಜೊತೆಯಲ್ಲಿ ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾರಿ) ದ.ವ. ಬೆಂಗಳೂರು, ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
2) ಯಾವ ಕಾರಣವನ್ನು ನೀಡದೆ ಅಥವಾ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತಿರಿಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ
3) ಟೆಂಡರ್ ಪ್ರಕ್ರಿಯೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000 ರಲ್ಲಿನ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ
4) ಅಂಗೀಕೃತ ಟೆಂಡರ್‌ದಾರರು ಕರಾರು ಮಾಡಿಕೊಳ್ಳುವ ಮುನ್ನ 3 ತಿಂಗಳ ಬಾಡಿಗೆಗೆ ಸಮನಾದ ಹಣವನ್ನು ಭದ್ರತಾ ಠೇವಣಿಯಾಗಿ ಡಿ.ಡಿ.ರೂಪದಲ್ಲಿ ನೀಡಬೇಕಾಗಿರುತ್ತದೆ ಮತ್ತು ಪ್ರತಿ ತಿಂಗಳು 10ನೇ ತಾರೀಖಿನ ಒಳಗೆ ಮಾಸಿಕ ಬಾಡಿಗೆ ಹಣವನ್ನು ಬ್ಯಾಂಕ್ ಡಿ.ಡಿ. ಮುಖಾಂತರ ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾರಿ) ದಕ್ಷಿಣ ವಲಯ, ಬೆಂಗಳೂರು, ಇವರಿಗೆ ಸಂದಾಯಮಾಡಬೇಕು.
5) ಟೆಂಡರ್‌ದಾರರು ಟೆಂಡರ್ ನಿಬಂಧನೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರ ಅರ್ಹತಾ ಬಿಡ್‌ನಲ್ಲಿ ತಮ್ಮ ಸ್ವಂತ ಮಾಹಿತಿ ಮತ್ತು ಅನುಭವದ ವಿವರಗಳನ್ನು ದಾಖಲಿಸುವುದು ಹಾಗೂ ಅನುಬಂಧ-2ರ ಆರ್ಥಿಕ ಬಿಡ್‌ನಲ್ಲಿ ಲೋಕೋಪಯೋಗಿ ಇಲಾಖೆ ನಿಗಧಿಪಡಿಸಿದ ಕನಿಷ್ಠ ಮಾಸಿಕ ಬಾಡಿಗೆಗಿಂತ ಹೆಚ್ಚು ದರಕ್ಕೆ ಬಿಡ್ ಮಾಡುವವರು, ಬಿಡ್ ದರವನ್ನು ನಮೂದಿಸುವುದು. ಎರಡು ಬಿಡ್‌ಗಳನ್ನು ಸಲ್ಲಿಸದೇ ಇರುವ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.
6) ಅಯ್ಕೆಯಾಗದ ಟೆಂಡರುದಾರರಿಗೆ ಅವರ ಇ.ಎಂ.ಡಿ. ಮೊಬಲಗನ್ನು ಟೆಂಡರ್ ಪ್ರಕ್ರಿಯೆ ಮುಗಿದ ನಂತರವೇ ಹಿಂದಿರುಗಿಸಲಾಗುವುದು.
7) ಯಶಸ್ವಿ ಬಿಡ್ಡುದಾರರು ಟೆಂಡರ್ ಪ್ರಕ್ರಿಯ ಮುಗಿದು ಈ ಕಛೇರಿಯಿಂದ ಅನುಮೋದನೆ ಪತ್ರವನ್ನು ನೀಡಿದ 7 ದಿನಗಳೊಳಗೆ ಠೇವಣಿ ಮೊತ್ತದೊಡನೆ ಗುತ್ತಿಗೆ ಕರಾರನ್ನು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಇ.ಎಂ.ಡಿ. ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

6.12.14

ವಾಣಿಜ್ಯ ತೆರಿಗೆ ಅಪರ ಆಯುಕ್ತರು,
(ಜಾರಿ), ದಕ್ಷಿಣ ವಲಯ, ಬೆಂಗಳೂರು.

# " ನಿಬಂಧನೆಗಳು "

ವಿಷಯ: ಬೆಂಗಳೂರಿನ ವಾಣಿಜ್ಯ ತೆರಿಗೆ ಕಾರ್ಯಾಲಯ–2, ರಾಜೇಂದ್ರನಗರ ಕೋರಮಂಗಲದ ಕಚೇರಿ ಆವರಣದಲ್ಲಿ ಕ್ಯಾಂಟೀನ್ (ಉಪಹಾರ ಗೃಹ)ವನ್ನು ನಡೆಸುವ ಟೆಂಡರ್ ಬಗ್ಗೆ

ಉಲ್ಲೇಖ: ವಾತೆಅಆ/ಜಾರಿ/ದವ/ಉಮ/ಸಿಆರ್.13/2011–12 ದಿ.1–12–2011

* * * *

1, ಗುತ್ತಿಗೆದಾರರು ಕ್ಯಾಂಟೀನ್ ಕಾರ್ಯ ಪ್ರಾರಂಭ ಮಾಡುವ ಮೊದಲು ಬೆಂಗಳೂರು ಮಹಾನಗರ ಪಾಲಿಕೆಯವರಿಂದ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪರವಾನಗಿಯನ್ನು (ಲೈಸೆನ್ಸ್) ಪ್ರಸ್ತುತಪಡಿಸಬೇಕು.

2, ಗುತ್ತಿಗೆದಾರರು ಪ್ರತಿ ಮಾಹೆ 10ನೇ ದಿನಾಂಕದೊಳಗೆ ಮಾಸಿಕ ಬಾಡಿಗೆ ಮೊತ್ತವನ್ನು ವಾಣಿಜ್ಯ ತೆರಿಗೆ ಅಪರ ಆಯುಕ್ತರು(ಜಾರಿ)–ದಕ್ಷಿಣ ವಲಯ, ಬೆಂಗಳೂರು ಇವರಿಗೆ ಬ್ಯಾಂಕ್ ಡಿ.ಡಿ. ಮುಖಾಂತರ ಸಂದಾಯ ಮಾಡಬೇಕು. ತಪ್ಪಿದಲ್ಲಿ ವಾರ್ಷಿಕ ಶೇಕಡ 12ರಂತೆ ಬಡ್ಡಿ ತೆರಬೇಕಾಗುತ್ತದೆ.

3, ಕ್ಯಾಂಟೀನು ನಡೆಸಲು ಬೇಕಾಗುವ ನೀರು ಸರಬರಾಜು ಹಾಗೂ ವಿದ್ಯುತ್ ಸಂಪರ್ಕ ವ್ಯವಸ್ಥೆಯನ್ನು ಇಲಾಖೆಯಿಂದ ಒದಗಿಸಲಾಗುವುದು

ಗುತ್ತಿಗೆದಾರರು ಕಾಲಕಾಲಕ್ಕೆ ತಾವು ಬಳಸಿದ : ಉಪಯೋಗಿಸಿದ ನೀರು ಹಾಗೂ ವಿದ್ಯುತ್ ಶುಲ್ಕಗಳನ್ನು ಪ್ರತಿ ಮಾಹೆ 10ನೇ ದಿನಾಂಕದೊಳಗೆ ಇಲಾಖೆಗೆ ಪಾವತಿಸುವುದು. ತಪ್ಪಿದಲ್ಲಿ ವಾರ್ಷಿಕ ಶೇ.12ರ ಬಡ್ಡಿ ದರದಲ್ಲಿ ಲೆಕ್ಕ ಹಾಕಿ ಬಾಕಿಯಿರುವ ಶುಲ್ಕವನ್ನು ವಸೂಲಿ ಮಾಡಿಕೊಳ್ಳಲಾಗುವುದು

4, ನಿಯೋಜಿಸಲ್ಪಟ್ಟ ಗುತ್ತಿಗೆದಾರರು ಕ್ಯಾಂಟೀನ್ ಕಟ್ಟಡವನ್ನು ವಶಕ್ಕೆ ತೆಗೆದುಕೊಳ್ಳುವ ಮುಂಚೆ ಮೂರು (3) ತಿಂಗಳ ಬಾಡಿಗೆ ಮೊತ್ತದಷ್ಟು ಹಣವನ್ನು ಒಟ್ಟಾರೆಯಾಗಿ ಮುಂಗಡವಾಗಿ ಡಿಡಿ ರೂಪದಲ್ಲಿ ಭದ್ರತಾ ಠೇವಣಿಯಾಗಿ ಪಾವತಿ ಮಾಡಬೇಕು.

5, ನಿಯೋಜಿಸಲ್ಪಟ್ಟ ಗುತ್ತಿಗೆದಾರರು ಯಾವುದೇ ಕಾರಣಕ್ಕೂ ಕ್ಯಾಂಟೀನ್ ನಡೆಸಲು ನೀಡಿರುವ ಜಾಗವನ್ನು ಬೇರೆಯವರಿಗೆ ಮರು ಗುತ್ತಿಗೆ ನೀಡುವುದಾಗಲೀ ಅಥವಾ ಇನ್ಯಾವುದೇ ವ್ಯಕ್ತಿಯೊಡನೆ ಭಾಗಶಃವಾಗಲೀ ಅಥವಾ ಪೂರ್ಣವಾಗಲೀ ಒಳ ಒಪ್ಪಂದ ಮಾಡಿಕೊಳ್ಳುವುದನ್ನು ಅಥವಾ ಕ್ಯಾಂಟೀನ್ ನಡೆಸುವುದನ್ನು ನಿಷೇಧಿಸಲಾಗಿದೆ.

6. ಕಟ್ಟಡದ ಒಳಗೆ ಅಥವಾ ಹೊರಗೆ ಯಾವುದೇ ಮಾರ್ಪಡಿಸುವ ಕೆಲಸವನ್ನು ಲಿಖಿತ ಅನುಮೋದನೆ ಇಲ್ಲದೆ ನಿರ್ವಹಿಸಬಾರದು. ಕ್ಯಾಂಟೀನ್ ಹೊರ ಮತ್ತು ಒಳ ಆವರಣವನ್ನು ಸ್ವಚ್ಛ ಹಾಗೂ ಶುಚಿಯಾಗಿ ಇಟ್ಟುಕೊಳ್ಳಬೇಕು. ವಾಣಿಜ್ಯ ತೆರಿಗೆ ಅಪರ ಆಯುಕ್ತರು(ಜಾರಿ)–ದಕ್ಷಿಣ ವಲಯ, ಬೆಂಗಳೂರು ಇವರು ವಿಧಿಸಿದ ನಿಯಮಗಳಿಗೆ ಒಳಪಡಬೇಕು.

7, ದೂರು (ದೂರುವಹಿ) ಪುಸ್ತಕವನ್ನು ನಿರ್ವಹಿಸಬೇಕು ಹಾಗೂ ಎಲ್ಲರಿಗೂ ಕಾಣುವಂತೆ ಹಾಗೂ ಸಿಗುವಂತೆ ಆ ಕಟ್ಟಡದಲ್ಲಿ ಇಟ್ಟಿರಬೇಕು ಮತ್ತು ಗ್ರಾಹಕರು ಬಯಸಿದಾಗ ನೀಡಬೇಕು.

8, ಗುತ್ತಿಗೆದಾರರು ತಯಾರಿಸುವ ಪಾನೀಯ ಹಾಗೂ ತಿಂಡಿ ತಿನಿಸುಗಳು ಉತ್ತಮ ಗುಣಮಟ್ಟದಾಗಿರಬೇಕು. ತೂಕ ಅಳತೆಗಳು, ಹಾಗೂ ಧಾರಣೆಯು ಸುತ್ತಮುತ್ತಲಿನ ಹಾಗೂ ಚಾಲ್ತಿ ಮಾರುಕಟ್ಟೆಯ ಧಾರಣೆಗಳಿಗೆ ಹೊಂದಾಣಿಕೆ ಆಗಬೇಕು.

9, ಯಾವುದೇ ಮುನ್ಸೂಚನೆ ಇಲ್ಲದೇ, ಯಾವುದೇ ವೇಳೆಯಲ್ಲಿ ವಾಣಿಜ್ಯ ತೆರಿಗೆ ಅಪರ ಆಯುಕ್ತರು(ಜಾರಿ)–ದಕ್ಷಿಣ ವಲಯ, ಬೆಂಗಳೂರು ಇವರಾಗಲೀ ಅಥವಾ ಇವರಿಂದ ನಾಮಾಂಕಿತಗೊಂಡ ಅಧಿಕಾರಿಗಳಾಗಲೀ ಕ್ಯಾಂಟೀನ್ ಕಟ್ಟಡವನ್ನು ಯಾವುದೇ ಸಮಯದಲ್ಲಿ ಪರಿವೀಕ್ಷಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಅಂತಹ ಸಂಧರ್ಭ ಬಂದಾಗ ಪರಿವೀಕ್ಷಕರಿಗೆ ಯಾವುದೇ ರೀತಿಯಲ್ಲಿ ತಡೆ ಒಡ್ಡುವಂತಿಲ್ಲ.

10, ಗುತ್ತಿಗೆ ಅವಧಿಯಲ್ಲಿ ಕಟ್ಟಡಕ್ಕೆ ಅಳವಡಿಸಿರುವ ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಫಿಟಿಂಗ್‌ಗಳನ್ನು ತೆಗೆದುಹಾಕುವಂತಿಲ್ಲ ಅಥವಾ ಹಾಳು ಮಾಡುವಂತಿಲ್ಲ. ಒಂದು ವೇಳೆ ಹಾನಿಗೊಳಿಸಿದಲ್ಲಿ ಹಾನಿಗೊಳಗಾದ ವಸ್ತುಗಳ ವೆಚ್ಚವನ್ನು ಗುತ್ತಿಗೆದಾರರು ನೀಡಿರುವ ಮುಂಗಡ ಹಣದಲ್ಲಿ ವಜಾ ಮಾಡಿಕೊಳ್ಳಲಾಗುವುದು ಹಾಗೂ ಈ ವೆಚ್ಚ ಮುಂಗಡ ಹಣಕಿಂತ ಹೆಚ್ಚಿದ್ದರೆ, ಅದನ್ನು ಸಹ ವಸೂಲಿ ಮಾಡಲಾಗುವುದು.

11, ಹೆಚ್ಚುವರಿ ವಿದ್ಯುತ್ : ನೀರು ಸರಬರಾಜು ಫಿಟಿಂಗ್‌ಗಳು ಅವಶ್ಯಕತೆಯಿದ್ದಲ್ಲಿ ಸಂಬಂಧಪಟ್ಟ ವಿದ್ಯುತ್ ಮಂಡಳಿ / ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರಿಂದ ಅನುಮತಿ ಪಡೆದು ಗುತ್ತಿಗೆದಾರರು ತಮ್ಮದೇ ವೆಚ್ಚದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ ಹಾಗೂ ಅವಧಿ ಮುಗಿದ ನಂತರ ವಾಣಿಜ್ಯ ತೆರಿಗೆ ಅಪರ ಆಯುಕ್ತರು(ಜಾರಿ)–ದಕ್ಷಿಣ ವಲಯ, ಬೆಂಗಳೂರು ಇವರ ಲಿಖಿತ ಅನುಮತಿ ಪಡೆದು ಕಟ್ಟಡಕ್ಕಾಗಲೀ : ಇನ್ನಿತರ ಫಿಟಿಂಗ್ಸ್‌ಗಳಿಗಾಗಲೀ ದಕ್ಕೆ ಆಗದಂತೆ ಬಿಚ್ಚಿಕೊಳ್ಳಬಹುದಾಗಿದೆ.

12, ಗುತ್ತಿಗೆ ಅವಧಿ ಮುಗಿದ ಕೂಡಲೇ ಕಟ್ಟಡ ಹಾಗೂ ಆವರಣವನ್ನು ಸುಸ್ಥಿತಿಯಲ್ಲಿರುವಂತೆ ತೆರವು ಮಾಡತಕ್ಕದ್ದು ತಪ್ಪಿದ್ದಲ್ಲಿ ಹಾಲಿ ಪಾವತಿಸುತ್ತಿದ್ದ ಬಾಡಿಗೆಯ ಎರಡರಷ್ಟನ್ನು ಪ್ರತಿ ತಿಂಗಳು ದಂಡವಾಗಿ ವಿಧಿಸಲಾಗುವುದು. ಗುತ್ತಿಗೆ ಅವಧಿಯಲ್ಲಿದ್ದಾಗ ಇಲಾಖೆಗೆ ಕಟ್ಟಡದ ಅವಶ್ಯಕತೆ ಕಂಡುಬಂದಲ್ಲಿ ತೆರವುಗೊಳಿಸಲು ಸೂಚನೆ ನೀಡಲಾಗುವುದು. ಸೂಚನೆ ನೀಡಿದ 30 ದಿನಗಳೊಳಗೆ ತೆರವುಗೊಳಿಸಬೇಕು ಹಾಗೂ ಅಂತಹ ಸಂದರ್ಭಗಳಲ್ಲಿ ಗುತ್ತಿಗೆದಾರರು ಯಾವುದೇ ಪರಿಹಾರವನ್ನು ಕೇಳುವಂತಿಲ್ಲ.

13, ಉಪಹಾರ ಮಂದಿರ ಪ್ರಾರಂಭವಾಗಿ ಒಂದು ವರ್ಷದ ಅವಧಿಗೆ ಮಾತ್ರ ನಡೆಸಲು ಅನುಮತಿ ನೀಡಲಾಗುವುದು. ಇದನ್ನು ಅಪರ ಆಯುಕ್ತರ ಒಪ್ಪಿಗೆ ಮೇರೆಗೆ ಮುಂದಿನ ವರ್ಷಕ್ಕೆ ಮುಂದುವರೆಸಬಹುದಾಗಿದೆ. ಆದರೆ ಗುತ್ತಿಗೆದಾರರು ಕ್ಯಾಂಟೀನ್ ಮುಂದುವರೆಸಲು ಕೋರಿ ಯಾವುದೇ ಹಕ್ಕನ್ನು ಮಂಡಿಸುವಂತಿಲ್ಲ.

14, ಯಾವುದೇ ಸಂದರ್ಭಗಳಲ್ಲೂ ಗುತ್ತಿಗೆದಾರರು ಈ ಮೇಲಿನ ನಿಬಂಧನೆಗೆ ಒಳಪಡದಿದ್ದಲ್ಲಿ ಅಥವಾ ಗುತ್ತಿಗೆ ಅವಧಿ ಮುಗಿದ ನಂತರವೂ ಕ್ಯಾಂಟೀನನ್ನು ತೆರವುಗೊಳಿಸದಿದ್ದರೆ, ವಾಣಿಜ್ಯ ತೆರಿಗೆ ಅಪರ ಆಯುಕ್ತರು(ಜಾರಿ)–ದಕ್ಷಿಣ ವಲಯ, ಬೆಂಗಳೂರು / ನಾಮಾಂಕಿತಗೊಂಡ ಅಧಿಕಾರಿಯು ಯಾವುದೇ ಪತ್ರ ವ್ಯವಹಾರಗಳಿಗೆ ಆಸ್ಪದಕೊಡದೇ, ಅವಶ್ಯಕತೆಯಿದ್ದಲ್ಲಿ ಪೋಲೀಸ್ ಸೇವೆ ಬಳಸಿಕೊಂಡು ಗುತ್ತಿಗೆದಾರರನ್ನು ತೆರವುಗೊಳಿಸುವ ಅಧಿಕಾರ ಹೊಂದಿರುತ್ತಾರೆ.

15, ಗುತ್ತಿಗೆ ಆವಧಿ ಮುಗಿದ ನಂತರ ಇಲಾಖೆಗೆ ಗುತ್ತಿಗೆದಾರರಿಂದ ಯಾವುದೇ ಬಾಕಿ ಇಲ್ಲ ಎಂದು ಮನವರಿಕೆ ಮಾಡಿಕೊಂಡು ನಂತರ ಠೇವಣಿ ಹಣವನ್ನು ಬಡ್ಡಿ ರಹಿತವಾಗಿ ಹಿಂದಿರುಗಿಸಲಾಗುವುದು. ತಪ್ಪಿದ್ದಲ್ಲಿ ಠೇವಣಿ ಹಣವನ್ನು ಬಾಕಿ ಮೊಬಲಗಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

16, ಮೇಲಿನ ನಿಬಂಧನೆಗೆ ಗುತ್ತಿಗೆದಾರರು ಬದ್ದರಾಗದ ಸಂದರ್ಭಗಳಲ್ಲಿ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು ಹಾಗೂ ಅದಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯವಹಾರವನ್ನು ಮುಂದುವರೆಸುವುದಿಲ್ಲ.

17, ಯಾವುದೇ ತಕರಾರುಗಳು ಉದ್ಭವಿಸಿದಲ್ಲಿ ಸರ್ಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ ಹಾಗೂ ಅದಕ್ಕೆ ಬದ್ದವಾಗಿರಬೇಕು.

18, ಯಾವುದೇ ಗುರುತರ ಕಾರಣ ನೀಡದೇ ಯಾವುದೇ ಸಂಧರ್ಭದಲ್ಲೂ, ನಿಗಧಿತ ಗುತ್ತಿಗೆ ಆವಧಿಗಿಂತ ಮುಂಚೆಯೇ ಪರವಾನಿಗೆಯನ್ನು ರದ್ದು ಮಾಡುವ ಅಧಿಕಾರವನ್ನು ವಾಣಿಜ್ಯ ತೆರಿಗೆ ಅಪರ ಆಯುಕ್ತರು(ಜಾರಿ)–ದಕ್ಷಿಣ ವಲಯ, ಬೆಂಗಳೂರು ಇವರಲ್ಲಿ ಕಾಯ್ದಿರಿಸಲಾಗಿದೆ. ಮುಂದೆವರೆದು ರದ್ದುಗೊಂಡ ಆವಧಿಗೆ ಗುತ್ತಿಗೆದಾರರು ಯಾವುದೇ ಪರಿಹಾರವನ್ನು ಕೇಳಲು ಹಕ್ಕನ್ನು ಪಡೆದಿರುವುದಿಲ್ಲ.

19. ಕಛೇರಿ ಕೆಲಸದ ದಿವಸಗಳಲ್ಲಿ ಮಾತ್ರ ಬೆಳಗ್ಗೆ 8–00 ಗಂಟೆಯಿಂದ ರಾತ್ರಿ 8–00 ಗಂಟೆಯವರೆಗೆ ಉಪಹಾರ ಮಂದಿರವನ್ನು ತೆರೆದಿರಬೇಕು.

20, ಟೆಂಡರ್‌ದಾರರು ಟೆಂಡರ್ ನಿಬಂಧನೆಯೊಂದಿಗೆ ಲಗತ್ತಿಸಲಾದ ಅನುಬಂಧ–1 ರ ಅರ್ಹತಾ ಬಿಡ್‌ನಲ್ಲಿ ತಮ್ಮ ಸ್ವಂತ ಮಾಹಿತಿ ಮತ್ತು ಅನುಭವದ ವಿವರಗಳನ್ನು ದಾಖಲಿಸುವುದು. ಆರ್ಥಿಕ ಬಿಡ್‌ನಲ್ಲಿ ಲೋಕೋಪಯೋಗಿ ಇಲಾಖೆ ನಿಗಧಿ ಪಡಿಸಿದ ಕನಿಷ್ಠ ಮಾಸಿಕ ಬಾಡಿಗೆಗಿಂತ ಹೆಚ್ಚು ದರಕ್ಕೆ ಬಿಡ್ ಮಾಡುವವರು, ಬಿಡ್ ದರವನ್ನು ನಮೂದಿಸಿ ಬಿಡ್ ಸಲ್ಲಿಸುವುದು. ಎರಡು ಲಕೋಟೆಗಳಲ್ಲಿ ಬಿಡ್ ಸಲ್ಲಿಸದ ಅಪೂರ್ಣ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಲಾಗುವುದು.

1-12-

ವಾಣಿಜ್ಯ ತೆರಿಗೆ ಅಪರ ಆಯುಕ್ತರು
(ಜಾರಿ)–ದಕ್ಷಿಣ ವಲಯ, ಬೆಂಗಳೂರು

ಗುತ್ತಿಗೆದಾರರ ಸಹಿ
ಮತ್ತು ವಿಳಾಸ

# ಅನುಬಂಧ–1

## ಅರ್ಹತಾ ಬಿಡ್

| ಕ್ರಮ ಸಂ. | ವಿವರ | |
|---|---|---|
| 1 | ಟೆಂಡರ್‌ದಾರರ ಹೆಸರು ಮತ್ತು ವಿಳಾಸ | |
| 2 | ಸ್ಥಿರ/ಮೊಬೈಲ್ ದೂರವಾಣಿ ಸಂ. | |
| 3 | ಆದಾಯ ತೆರಿಗೆ ಇಲಾಖೆಯಿಂದ ಪಡೆದ ಪ್ಯಾನ್ ಸಂಖ್ಯೆ | |
| 4 | ಹೋಟೆಲ್ ನಡೆಸಲು ಬೆಂಗಳೂರು ಮಹಾನಗರ ಪಾಲಿಕೆಯಿಂದ ಪಡೆದ ಪರವಾನಿಗೆ ವಿವರ | |
| 5 | ವಾಣಿಜ್ಯ ತೆರಿಗೆ ಇಲಾಖೆಯಿಂದ ಪಡೆದ ನೊಂದಣಿ ಸಂಖ್ಯೆ ವಿವರ | |
| 6 | ಕಾರ್ಮಿಕ ಇಲಾಖೆಯ ಪರವಾನಿಗೆ ವಿವರ | |
| 7 | ಉಪಹಾರ ಗೃಹ ನಡೆಸಿ ಅನುಭವ ಹೊಂದಿರುವ ಬಗ್ಗೆ ವಿವರಗಳು | |
| 8 | ಪ್ರಸ್ತುತ ಯಾವ ಯಾವ ಸರ್ಕಾರಿ ಕಛೇರಿಗಳಲ್ಲಿ/ ಸಾರ್ವಜನಿಕ ಸಂಸ್ಥೆಗಳಲ್ಲಿ ಕ್ಯಾಂಟೀನ್ ನಡೆಸುತ್ತಿದ್ದೀರಿ : ವಿವರಗಳು ಮತ್ತು ಅಂಥ ಸಂಸ್ಥೆಗಳಿಂದ ದೃಢೀಕೃತ ಪತ್ರ (ಒಂದು ಅಥವಾ ಎರಡು ಸಂಸ್ಥೆಗಳಿಂದ ಪ್ರಮಾಣ ಪತ್ರ) | |
| 9 | ಹೆಚ್ಚುವರಿ ಅರ್ಹತೆಗಳು (ಇದ್ದಲ್ಲಿ ನಮೂದಿಸಿ) | |


ಈ ಮೇಲೆ ತಿಳಿಸಿದ ವಿವರಗಳು ಸತ್ಯವಾಗಿರುತ್ತದೆ ಎಂದು ದೃಢೀಕರಿಸಿದೆ.

ಟೆಂಡರ್‌ದಾರರ ಸಹಿ

ದಿನಾಂಕ

# ಅನುಬಂಧ-2

## ಆರ್ಥಿಕ ಬಿಡ್

<table>
<tr><th>ಕ್ರ. ಸಂ.</th><th>ಕೆಲಸದ ಹೆಸರು</th><th>ಗುತ್ತಿಗೆ ಅವಧಿ</th><th>ಪಿ.ಡಬ್ಲ್ಯೂ.ಡಿ ಇಲಾಖೆ ನಿಗದಿ ಪಡಿಸಿದ ಮಾಸಿಕ ಬಾಡಿಗೆ</th><th>ಬಿಡ್ ಮಾಡುವ ಮಾಸಿಕ ಬಾಡಿಗೆ</th><th>ಷರಾ</th></tr>
<tr><td>1</td><td>2</td><td>3</td><td>4</td><td>5</td><td>6</td></tr>
<tr><td>1</td><td>ವಿಸ್ತೀರ್ಣ 1099 ಚದರ ಅಡಿಗಳು/102 ಚ.ಮೀ (ಎ ಮತ್ತು ಬಿ ಬ್ಲಾಕ್ ಕಟ್ಟಡದ ನಡುವೆ ಬರುವ ನೆಲಮಹಡಿಯ ಪಶ್ಚಿಮೊತ್ತರ ಭಾಗದಲ್ಲಿ) ವಾಣಿಜ್ಯ ತೆರಿಗೆ ಕಾರ್ಯಾಲಯ-2, ಕೋರಮಂಗಲ, ರಾಜೇಂದ್ರನಗರ, ಬೆಂಗಳೂರು-47 ಇಲ್ಲಿ ನೌಕರರ ಉಪಹಾರ ಮಂದಿರವನ್ನು ನಡೆಸುವುದು.<br>ನಕ್ಷೆ<br><br></td><td>ಒಂದು ವರ್ಷ</td><td>ರೂ. 37,846 -00 (ಮೂವತ್ತೇಳು ಸಾವಿರದಎಂಟು ನೂರಾ ನಲವತ್ತಾರು ರೂಪಾಯಿಗಳು)</td><td>ರೂ.<br><br>(ಅಕ್ಷರಗಳಲ್ಲಿ)</td><td></td></tr>
</table>

**ಟಿಪ್ಪಣಿ:** ಕಲಂ 5 ರಲ್ಲಿ ಪಿ.ಡಬ್ಲ್ಯೂ.ಡಿ. ಇಲಾಖೆ ನಿಗದಿಪಡಿಸಿದ ಮಾಸಿಕ ಬಾಡಿಗೆಗಿಂತ ಹೆಚ್ಚುವರಿಯಾಗಿ ನೀವು ಪಾವತಿಸಲು ಉದ್ದೇಶಿಸಿರುವ (ಬಿಡ್ ಮಾಡುವ) ಬಾಡಿಗೆ ಮೊತ್ತವನ್ನು ಅಂಕಿಗಳಲ್ಲಿ ಮತ್ತು ಅಕ್ಷರಗಳಲ್ಲಿ ನಮೂದಿಸುವುದು.

ಸ್ಥಳ:

ಗುತ್ತಿಗೆದಾರರ ಹೆಸರು ಮತ್ತು ಸಹಿ